## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ : ನೋಂದಣಿ ಮತ್ತು ಮುದ್ರಾಂಕ ಇಲಾಖೆಯಲ್ಲಿ, ಅಂತರ್ಜಾಲದ ಮುಖಾಂತರ ಸಾರ್ವಜನಿಕರಿಗೆ ಇ–ಸ್ಟಾಂಪಿಂಗ್ ಪ್ರಮಾಣ ಪತ್ರ ನೀಡಲು ಒಪ್ಪಂದದ ಕುರಿತು.

ಓದಲಾಗಿದೆ : ನೋಂದಣಿ ಮಹಾಪರಿವೀಕ್ಷಕರು ಹಾಗೂ ಮುದ್ರಾಂಕಗಳ ಆಯುಕ್ತರು ಇವರ ಪತ್ರ ಸಂಖ್ಯೆ: ಎಸ್‌ಟಿಪಿ/54/2019–20 ದಿನಾಂಕ: 25–09–2019 ಮತ್ತು 22–05–2020.

* * * * *

ಪ್ರಸ್ತಾವನೆ:

ಮೇಲೆ ಓದಲಾದ ಪ್ರಸ್ತಾವನೆಯಲ್ಲಿ, ನೋಂದಣಿ ಮಹಾಪರಿವೀಕ್ಷಕರು ಹಾಗೂ ಮುದ್ರಾಂಕಗಳ ಆಯುಕ್ತರವರು 2020–21ನೇ ಸಾಲಿನ ಆಯವ್ಯಯದಲ್ಲಿ ನ್ಯಾಷನಲ್ ಇ–ಆಡಳಿತ ಸೇವೆ National e-Governance Services Limited (NeSL) ಪೋರ್ಟಲ್ ಮುಖಾಂತರ ಬ್ಯಾಂಕ್ ಮತ್ತು Non Banking Financing Companies(NBFCs) ಗಳು ಆನ್‌ಲೈನ್‌ನಲ್ಲಿ ನೋಂದಾಯಿಸುವ ಸಾಲ ದಾಖಲಾತಿಗಳಿಗೆ ಮುದ್ರಾಂಕ ಶುಲ್ಕವನ್ನು ಪಾವತಿಸುವ ವ್ಯವಸ್ಥೆಯನ್ನು ಆನ್‌ಲೈನ್ ಮುಖಾಂತರ ಜಾರಿಗೆ ತರಲಾಗುವುದು ಎಂದು ಘೋಷಣೆ ಮಾಡಲಾಗಿರುತ್ತದೆ. ಇದಕ್ಕೆ ಸಂಬಂಧಿಸಿದಂತೆ, NeSL ರವರು ಹಾಗೂ Stock Holding Corporation of India Ltd(SHCIL)., ರವರು ಕರ್ನಾಟಕ ರಾಜ್ಯದಲ್ಲಿ ನೋಂದಣಿಗೆ ಕಡ್ಡಾಯವಲ್ಲದ ಬ್ಯಾಂಕ್ ದಸ್ತಾವೇಜುಗಳಿಗೆ ಸಂಬಂಧಪಟ್ಟ ಆರ್ಟಿಕಲ್‌ಗಳಿಗೆ ಮುದ್ರಾಂಕ ಶುಲ್ಕವನ್ನು ಡಿಜಿಟಲ್ ಮಾದರಿಯಲ್ಲಿ ಪಾವತಿಸಿಕೊಳ್ಳುವ ಬಗ್ಗೆ ಬಜೆಟ್ ಘೋಷಣೆಗೆ ಪೂರ್ವದಲ್ಲಿಯೇ NeSL ಹಾಗೂ SHCIL, ರವರು ಸಾರ್ವಜನಿಕರು/ ಗ್ರಾಹಕರು ಬ್ಯಾಂಕಿನಿಂದ ಹಾಗೂ ಬ್ಯಾಂಕೇತರ ಹಣಕಾಸು ಸಂಸ್ಥೆಗಳಿಂದ ಪಡೆಯುವ ಸಾಲಗಳ ಸಂಬಂಧದಲ್ಲಿ ಪ್ರಮುಖವಾಗಿ ಕೆಳಕಂಡ ಪಟ್ಟಿಯಲ್ಲಿ ನಮೂದಿಸಲಾದ ದಸ್ತಾವೇಜುಗಳು ಬ್ಯಾಂಕಿಂಗ್/ಬ್ಯಾಂಕೇತರ ಹಣಕಾಸು ಸಂಸ್ಥೆಗಳಿಗೆ ಬರೆದುಕೊಡುವ ದಸ್ತಾವೇಜುಗಳಾಗಿರುತ್ತವೆ. ಇವುಗಳ ಪೈಕಿ ಸ್ವಾಧೀನ ಸಹಿತ (Mortgage with Possession) ಹಾಗೂ ಸ್ವಾಧೀನ ರಹಿತ (Mortgage without Possession) ಆಧಾರ ಪತ್ರಗಳು ನೋಂದಣಿ ಕಾಯ್ದೆಯ ಕಲಂ 17ರನ್ವಯ ಕಡ್ಡಾಯವಾಗಿ ನೋಂದಾಯಿಸಬೇಕಾದ (Compulsary Registrable Documents) ದಸ್ತಾವೇಜುಗಳಾಗಿದ್ದು, ಇನ್ನುಳಿದ ದಸ್ತಾವೇಜುಗಳು ಕಲಂ 18ರನ್ವಯ ಐಚ್ಛಿಕವಾಗಿರುತ್ತವೆ (Registration is optional). ಸದರಿ ದಸ್ತಾವೇಜುಗಳಿಗೆ ಕರ್ನಾಟಕ ಮುದ್ರಾಂಕ ಕಾಯ್ದೆಯಲ್ಲಿ ಪಾವತಿಸಬೇಕಾದ ಮುದ್ರಾಂಕ ಶುಲ್ಕದ ದರಗಳನ್ನು ಅನುಚ್ಛೇದ (Article)ದೊಂದಿಗೆ ಉಪ ನೋಂದಣಿ ಕಛೇರಿಯಲ್ಲಿ ನೋಂದಣಿಯಾಗುವ ದಸ್ತಾವೇಜುಗಳು ಹಾಗೂ ನೋಂದಣಿಯೇತರ ದಸ್ತಾವೇಜುಗಳಿಗೆ ACC(Authorized Collection Centres) ಕೇಂದ್ರಗಳಿಂದ ಮುದ್ರಾಂಕ ಶುಲ್ಕ ಪಾವತಿಸಿ ಭೌತಿಕವಾಗಿ ಸರ್ಟಿಫಿಕೇಟ್ (Physical Certificate) ಪಡೆಯುವ ಅಂಕಿ ಅಂಶಗಳನ್ನು ಈ ಕೆಳಗೆ ವಿವರಿಸಿರುತ್ತಾರೆ.

**Articles relating to Bank documents**

| Sl. No. | Description of Documents | Article | Stamp Duty Payable | Registered in SR office | No of certificates/ documents issued through ACC's (offline) |
|---|---|---|---|---|---|
| 1 | Affidavit | 4 | 20/- | 615 | 8198134 |
| 2 | Agreement | 5(j) | Rs.200/- | 171081 | 215405 |
| 3 | D.T.D | 6(1) | 0.1%<br>0.2%<br>Max 10 Lakh | 171081 | 215405 |

. . . 2

| Sl. No. | Description of Documents | Article | Stamp Duty Payable | Registered in SR office | No of certificates/ documents issued through ACC's (offline) |
|---|---|---|---|---|---|
| 4 | **Pawn or Pledge** | 6(2) | 0.1%<br>0.2%<br>Max 10 Lakh | 2 | |
| 5 | **Indemnity Bond** | 29 | 200/- | 201 | 574141 |
| 6 | **Mortgage with Possession** | 34(a) | 5% | 1175 | |
| 7 | **Mortgage without possession** | 34(b) | 0.5% | 500895 | 64979 |
| 8 | **Deed of hypothecation** | 34(b) | 0.1%<br>0.2%<br>Max 10 Lakh | 8 | |
| 9 | **Power of Attorney** | 41(c) | 200/- | 34001 | 263067 |
| | | | TOTAL | 698512 | 9557922 |
| | | | % | 6.8% | 93.2% |

ಸದರಿ ಪಟ್ಟಿಯಲ್ಲಿನ ಅಂಕಿ ಅಂಶಗಳನ್ನು ಅವಲೋಕಿಸಿದಾಗ ಶೇ.7ರಷ್ಟು ಪ್ರಕರಣಗಳು ಕಡ್ಡಾಯ ನೋಂದಣಿ ದಸ್ತಾವೇಜುಗಳಿಗೆ ಮುದ್ರಾಂಕ ಶುಲ್ಕ ಪಾವತಿಸಲು ಸಾರ್ವಜನಿಕರು ಉಪ ನೋಂದಣಿ ಕಛೇರಿಗೆ ನೋಂದಣಿಗೆ ಹಾಜರಾಗಿ ದಸ್ತಾವೇಜನ್ನು ನೋಂದಾಯಿಸುವ ಮೂಲಕ ಪಾವತಿಸಲಾಗುತ್ತಿದೆ. ಉಳಿದ ಶೇ.93ರಷ್ಟು ನೋಂದಣಿಗೆ ಕಡ್ಡಾಯವಲ್ಲದ ಬ್ಯಾಂಕಿಂಗ್ ದಸ್ತಾವೇಜುಗಳಾದ Bank Guarantee, Loan Agreement, Indemnity Bond, Deed of Hypothecation, Pawn and Pledge, Declaration, Promissory Notes ಮುಂತಾದ ದಸ್ತಾವೇಜುಗಳಿಗೆ ಇ–ಸ್ಟಾಂಪಿಂಗ್ ಪ್ರಮಾಣ ಪತ್ರವನ್ನು ACC (Authorized Collection Centre) ಕೇಂದ್ರಗಳಿಗೆ ಹೋಗಿ ಪಡೆಯುವುದರ ಬದಲಾಗಿ NeSL ರವರ ಮುಖಾಂತರ ಅಂತರ್ಜಾಲದಲ್ಲಿ ಮುದ್ರಾಂಕ ಶುಲ್ಕವನ್ನು ಡಿಜಿಟಲ್ ಮಾದರಿಯಲ್ಲಿ ಪಾವತಿಸಲು SHCIL ರವರ Payment Gateway ಯನ್ನು ಉಪಯೋಗಿಸಿಕೊಂಡು Swift Messaging System ನ ಮುಖಾಂತರ ಮುದ್ರಾಂಕ ಶುಲ್ಕವನ್ನು ಪಾವತಿಸಿಕೊಂಡು, ಡಿಜಿಟಲ್ ಮಾದರಿಯಲ್ಲಿ NeSL ಹಾಗೂ Swift Messaging System ನ ಮುಖಾಂತರ ಪಡೆಯಲು ಸೌಲಭ್ಯ ಕಲ್ಪಿಸಲಾಗುತ್ತಿದೆ.

ಪ್ರಸ್ತುತದಲ್ಲಿ ಅಂತರ್ಜಾಲದ ಮುಖಾಂತರ ಇ–ಸ್ಟಾಂಪಿಂಗ್ ಪ್ರಮಾಣ ಪತ್ರವನ್ನು ಕರ್ನಾಟಕ ಮುದ್ರಾಂಕ ಕಾಯ್ದೆ 1957ರ ಅನುಚ್ಛೇದ (4) ಪ್ರಮಾಣ ಪತ್ರಗಳು ಹಾಗೂ ಅನುಚ್ಛೇದ (5j) (ಇನ್ನಿತರ ಉದ್ದೇಶಗಳಿಗಾಗಿ) ಪ್ರಮಾಣ ಪತ್ರಗಳಿಗೆ ಕ್ರಮವಾಗಿ ರೂ.20/– ಮತ್ತು ರೂ.200/–ಗಳನ್ನು Physical Formatನಲ್ಲಿ ಪಡೆಯಲಾಗುತ್ತಿದ್ದು, ದಿನಾಂಕ:31–08–2018ರ ಪತ್ರದಲ್ಲಿನ ಸರ್ಕಾರದ ಆದೇಶದಂತೆ ಅನುಷ್ಠಾನಗೊಳಿಸಲಾಗಿರುತ್ತದೆ.

ಈ ಪದ್ಧತಿಯನ್ನು ಅಳವಡಿಸಿಕೊಳ್ಳಲು ಈಗಾಗಲೇ SHCIL., ರವರು Softwareನ್ನು ಅಭಿವೃದ್ಧಿಪಡಿಸಿದ್ದು, ಈಗಾಗಲೇ ದೆಹಲಿಯಲ್ಲಿ Digital e-Stamping ಪದ್ಧತಿಯನ್ನು ಅಳವಡಿಸಿ, ಪ್ರಮಾಣ ಪತ್ರವನ್ನು ಪಡೆಯಲು ಅವಕಾಶ ಕಲ್ಪಿಸಿರುತ್ತಾರೆ.

ಕರ್ನಾಟಕ ರಾಜ್ಯದ ಉಪ ನೋಂದಣಿ ಕಛೇರಿಗಳಲ್ಲಿ ನೋಂದಣಿಯಾಗುವ ದಸ್ತಾವೇಜುಗಳಿಗೆ ಹಾಗೂ ನೋಂದಣಿಯೇತರ ದಸ್ತಾವೇಜುಗಳಿಗೆ ಕರ್ನಾಟಕ ಮುದ್ರಾಂಕ ಕಾಯ್ದೆ, 1957ರ ಕಲಂ 10 ಮತ್ತು 10ಎ ರಂತೆ ಹಾಗೂ Karnataka Stamp (Franking Impression of Stamp) Rules, 2000 ಹಾಗೂ Karnataka

. . . 3

Stamp (Payment of Duty by means of e-Stamping) Rules, 2009 ರಂತೆ ಮುದ್ರಾಂಕ ಶುಲ್ಕವನ್ನು ಪಾವತಿಸಿಕೊಳ್ಳಲಾಗುತ್ತಿದೆ.

ಆದ್ದರಿಂದ, NeSL ಮತ್ತು SHCIL., ಇವರ Payment Gateway ಹಾಗೂ Swift Messaging System ಉಪಯೋಗಿಸಿಕೊಂಡು ಕರ್ನಾಟಕ ರಾಜ್ಯದಲ್ಲಿ ನೋಂದಣಿ ಕಡ್ಡಾಯವಲ್ಲದ ಬ್ಯಾಂಕ್ ಸಾಲದ ಕರಾರು ಪತ್ರಗಳಿಗೆ ವಿದ್ಯುನ್ಮಾನದ್ವಾರ Digital e-Stamping ಪದ್ಧತಿಯನ್ನು ಅಳವಡಿಸಲು The Karnataka Stamp (Payment of Duty by means of e-stamping) Rules, 2009ರ ನಿಯಮ 14ರಲ್ಲಿ ಅವಕಾಶವಿದ್ದು, ಕರ್ನಾಟಕ ಮುದ್ರಾಂಕ ಕಾಯ್ದೆ, 1957ರ ಕಲಂ 10ಕ್ಕೆ ತಿದ್ದುಪಡಿ ತರುವ ಬಗ್ಗೆ ಈಗಾಗಲೇ 2020–21ರ ಸಾಲಿನ ಆಯವ್ಯಯದಲ್ಲಿ ಘೋಷಣೆ ಮಾಡಿರುವುದರಿಂದ, ಅನುಮೋದನೆ ನೀಡುವಂತೆ ಕೋರಿ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ನೋಂದಣಿ ಮಹಾಪರಿವೀಕ್ಷಕರು ಹಾಗೂ ಮುದ್ರಾಂಕಗಳ ಆಯುಕ್ತರವರ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ.

**ಸರ್ಕಾರದ ಆದೇಶ ಸಂಖ್ಯೆ: ಕಂಇ/ಎಂಎಸ್ಎಂಯು/19/2019**
**ಬೆಂಗಳೂರು, ದಿನಾಂಕ: 21–08–2020**

ಪ್ರಸ್ತಾವನೆಯಲ್ಲಿ ವಿವರಿಸಲಾದ ಅಂಶಗಳ ಹಿನ್ನೆಲೆಯಲ್ಲಿ, The Karnataka Stamp (Payment of Duty by means of e-stamping) Rules, 2009ರ ನಿಯಮ 14 ರಲ್ಲಿ e-Stamp ಮಾಡಲು ಅವಕಾಶವಿದ್ದು, ಸಂಬಂಧಪಟ್ಟ ನಿಯಮಗಳಿಗೆ ಸೂಕ್ತ ತಿದ್ದುಪಡಿ ಮಾಡುವ ಷರತ್ತಿಗೊಳಪಟ್ಟು National e-Governance Service Limited ಮುಖಾಂತರ Stock Holding Corporation of India Ltd (SHCIL)., ರವರ Digital e-Stamping ಪದ್ಧತಿಯನ್ನು ಅಳವಡಿಸಿಕೊಳ್ಳಲು ಅನುಮೋದನೆ ನೀಡಿ ಆದೇಶಿಸಿದೆ.

Stock Holding Corporation of India ಇವರು Digital e-Stamping ಮಾಡಲು ವಸೂಲಾದ ಮುದ್ರಾಂಕ ಶುಲ್ಕವನ್ನು ಲೆಕ್ಕಶೀರ್ಷಿಕೆ " 0030–02–103–0–01" ಗೆ ಜಮಾ ಮಾಡುವುದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 222 ವೆಚ್ಚ–7/2020 ದಿನಾಂಕ: 12–08–2020 ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಕೆ.ಎಲೇಶ್ ಬಾಬು)
ಸರ್ಕಾರದ ಅಧೀನ ಕಾರ್ಯದರ್ಶಿ,
ಕಂದಾಯ ಇಲಾಖೆ
(ನೋಂದಣಿ ಮತ್ತು ಮುದ್ರಾಂಕ)

ಇವರಿಗೆ:

1) ಪ್ರಧಾನ ಮಹಾಲೇಖಪಾಲರು (ಎ&ಇ) ರವರ ಕಾರ್ಯದರ್ಶಿ, ಕರ್ನಾಟಕ, ಪಾರ್ಕ್ ಹೌಸ್ ರಸ್ತೆ, ಅಂಚೆ ಪೆಟ್ಟಿಗೆ ಸಂಖ್ಯೆ: 5329, ಬೆಂಗಳೂರು–560 001.
2) ನೋಂದಣಿ ಮಹಾಪರಿವೀಕ್ಷಕರು ಹಾಗೂ ಮುದ್ರಾಂಕಗಳ ಆಯುಕ್ತರು, ಕಂದಾಯ ಭವನ, ಬೆಂಗಳೂರು.
3) ನ್ಯಾಷನಲ್ ಇ–ಗವರ್ನರ್ಸ್ ಸರ್ವೀಸ್ ನಿಯಮಿತ, ನಂ–3, ನೆಲಮಹಡಿ, ದಿ ಎಸ್ಟೇಟ್, ಡಿಕನ್ಸನ್ ರಸ್ತೆ, ಬೆಂಗಳೂರು– 560 041

4) ಮೆ: ಸ್ಟಾಕ್ ಹೋಲ್ಡಿಂಗ್ ಕಾರ್ಪೋರೇಷನ್ ಆಫ್ ಇಂಡಿಯಾ, ಬ್ರಾಂಚ್ ಆಫೀಸ್, ನಂ.51, 1ನೇ ಕ್ರಾಸ್, ಬಿಜಿಎಸ್ಇ ಬಿಲ್ಡಿಂಗ್, ಜೆ.ಸಿ. ರಸ್ತೆ, ಬೆಂಗಳೂರು–560 027
5) ಎಲ್ಲಾ ಜಿಲ್ಲಾ ನೋಂದಣಾಧಿಕಾರಿಗಳಿಗೆ–ಐಜಿಆರ್ ಮೂಲಕ.
6) ಎಲ್ಲಾ ಹಿರಿಯ ಉಪ ನೋಂದಣಾಧಿಕಾರಿ/ಉಪ ನೋಂದಣಾಧಿಕಾರಿಗಳಿಗೆ–ಐಜಿಆರ್ ಮೂಲಕ.

ಪ್ರತಿಗಳು:

1) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು (ವಿಪತ್ತು ನಿರ್ವಹಣೆ, ಭೂಮಿ & ಯುಡಿಟಿಆರ್), ಕಂದಾಯ ಇಲಾಖೆ ಇವರ ಆಪ್ತ ಕಾರ್ಯದರ್ಶಿಗಳು, ಬಹುಮಹಡಿಗಳ ಕಟ್ಟಡ, ಬೆಂಗಳೂರು.
2) ಸರ್ಕಾರದ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ) ಇವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
3) ಸರ್ಕಾರದ ಜಂಟಿ ಕಾರ್ಯದರ್ಶಿ, ಕಂದಾಯ ಇಲಾಖೆ (ವಿಪತ್ತು ನಿರ್ವಹಣೆ ಮತ್ತು ನೋಂದಣಿ & ಮುದ್ರಾಂಕ) ಇವರ ಆಪ್ತ ಸಹಾಯಕರು, ಬಹುಮಹಡಿಗಳ ಕಟ್ಟಡ, ಬೆಂಗಳೂರು.
4) ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.